**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,ರವರ ನ್ಯಾಯಾಲಯ, ಕಡೂರು**

**ಸಿ.ಸಿ.ನಂ.542/2019**

**ದಿನಾಂಕಃ08.04.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

ಪಿ.ಡಬ್ಲ್ಯುಃ4 ಸಿ.ಡಬ್ಲ್ಯುಃ6

ಸಾಕ್ಷಿಯ ಹೆಸರು ಃ ತಿಮ್ಮಣ್ಣ
ತಂದೆಯ ಹೆಸರು ಃ ತಿಮ್ಮಣ್ಣ
ವಯಸ್ಸು ಃ 56 ವರ್ಷ
ಉದ್ಯೋಗ ಃ ವ್ಯಾಪಾರ
ವಾಸ ಃ ಜೋಡಿತಿಮ್ಮಾಪುರ

**ಮುಖ್ಯ ವಿಚಾರಣೆಃ ಮಾನ್ಯ ಹಿಸಸಅ ಅವರಿಂದಃ**

ಕಳೆದ 20 ವರ್ಷಗಳಿಂದ ನಾನು ಬೀರೂರು ಕಡೆಯಿಂದ 2 ನೇ ರೈಲ್ವೆ ಗೇಟಿನ ಬಳಿ ಬೆಳಗ್ಗೆ 9.00 ರಿಂದ ರಾತ್ರಿ 9.00 ಗಂಟೆಯವರೆಗೂ ಎಳನೀರು ವ್ಯಾಪಾರ ಮಾಡುತ್ತಿದ್ದೇನೆ. ಮೃತ ಕಾಂತರಾಜುರವರ ಪರಿಚಯ ಇತ್ತು. ಮೃತ ಕಾಂತರಾಜು ಹೇಗೆ ಮೃತಪಟ್ಟರು ಎಂದು ನಾನು ನೋಡಿರುವುದಿಲ್ಲ. ನನ್ನ ಎದುರಿಗೆ ಅಪಘಾತವಾಗಿದೆ ಮತ್ತು ನಾನು ಅಪಘಾತ ನೋಡಿದ್ದೇನೆ ಎಂದು ಪೋಲೀಸರಿಗೆ ಹೇಳಿಕೆ ನೀಡಿರುವುದಿಲ್ಲ. ಅಪಘಾತಪಡಿಸಿದ ಲಾರಿ ಚಾಲಕನನ್ನು ನಾನು ನೋಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ರವರು ಅನುಮತಿ ಕೋರಿದ್ದು ಸಾಕ್ಷಿಯ ಹೇಳಿಕೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು. )**

**ಪಾಟೀ ಸವಾಲುಃ ಮಾನ್ಯ ಹಿಸಸಅ ಅವರಿಂದಃ**

ಕಳೆದ ಮೂರೂವರೆ ವರ್ಷಗಳ ಹಿಂದೆ ಸಂಜೆ 6.00 ಗಂಟೆ ಸಮಯದಲ್ಲಿ ನಾನು ಎಳನೀರು ಅಂಗಡಿಯಲ್ಲಿರುವಾಗ ಒಂದು ಲಾರಿ ಬಂದು ಒಬ್ಬ ಹುಡುಗನಿಗೆ ಅಪಘಾತಪಡಿಸಿರುತ್ತದೆ ಅಂದರೆ ಸರಿಯಲ್ಲ. ಸದರಿ ಹುಡುಗ ಜೋಡಿ ತಿಮ್ಮಾಪುರದಿಂದ ಬೀರೂರು ಕಡೆಗೆ ರಸ್ತೆಯ ಎಡಭಾಗದಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ತರೀಕೆರೆ ಕಡೆಯಿಂದ ಬರುತ್ತಿದ್ದ ಲಾರಿ ಟಿ.ಎನ್.34 ಕ್ಯೂ.6710 ನಂಬರಿನ 10 ಚಕ್ರದ ಲಾರಿಯನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಡಿಕ್ಕಿಪಡಿಸಿ, ಆತನ ದೇಹದ ಮೇಲೆ ಚಕ್ರಗಳು ಹರಿದ

ಪರಿಣಾಮ ಸೊಂಟದಿಂದ ಪಾದದವರೆಗೆ ಸಂಪೂರ್ಣ ದೇಹ ಜಜ್ಜಿ ಕಾಂತರಾಜು ಮೃತಪಟ್ಟಿರುತ್ತಾನೆ ಅಂದರೆ ನನಗೆ ಗೊತ್ತಿಲ್ಲ. ಆ ದಿನ ಅಪಘಾತಪಡಿಸಿದ ಲಾರಿಯ ಚಾಲಕ ಆರೋಪಿಯಾಗಿದ್ದನು ಅಂದರೆ ಸರಿಯಲ್ಲ. ಎಲ್ಲಾ ವಿಚಾರಗಳನ್ನು ಕುರಿತು ಪೋಲೀಸರೊಂದಿಗೆ ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಸಾಕ್ಷಿ ತನ್ನ ಹೇಳಿಕೆಯನ್ನು ಓದಿ ತಿಳಿಸಲಾಗಿ, ಸದರಿ ಹೇಳಿಕೆಯನ್ನು ನಿರಾಕರಿಸಿದ ಕಾರಣ ಸದರಿ ಅಲ್ಲಗಳೆದ ಹೇಳಿಕೆಯ ಭಾಗವಾದ ಎಂದಿನಂತೆ....................ದಿನಾಂಕ................ಎಂಬ ಭಾಗವನ್ನು ನಿಪಿ-4 ಎಂದು ಗುರುತಿಸಲಾಯಿತು. ಆರೋಪಿ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.</u>**

**ಮರು ವಿಚಾರಣೆಃ ಇರುವುದಿಲ್ಲ.**

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ದೀಪು ಎಂ.ಟಿ.)
3 ನೇ.ಹೆ.ಪ್ರಃದಃನ್ಯಾಃದಂ.,ರವರು, ಕಡೂರು.